ಸಿಗುವುದಾದರೆ ಯಾರಿಗೆ ತಾನೇ ಬೇಡ? ಹೀಗಾಗಿಯೇ ಈ ಸೀರೆ ಇಂದು ಜನಪ್ರಿಯತೆಯ ಹಾದಿ ಹಿಡಿದಿದೆ. ಈ ಸೀರೆಗಳು ಹಗುರ, ಮೃದು ಹಾಗೂ ಉಡಲು ಆರಾಮದಾಯಕ. ಇಂತಹ ಸೀರೆಗಳ ನಿರ್ವಹಣೆಯೂ ಸುಲಭ. ಬಣ್ಣವೂ ಮಾಸುವುದಿಲ್ಲ. ಅಂದ ಚಂದಕ್ಕೆ ಕೊರತೆಯೇನೂ ಇಲ್ಲ. ಹೀಗಾಗಿ ಆರ್ಟ್ ಸಿಲ್ಕ್ ಮಹಿಳೆಯರ ಮೆಚ್ಚುಗೆ ಗಳಿಸಿದ್ದು.

## ಆರ್‌ಎಂಕೆವಿ ಸಿಲ್ಕ್ ಸೊಬಗು

ರೇಷ್ಮೆ ಸೀರೆ ಎಂದರೆ ಮಹಿಳೆಯರು ಮುಗಿಬೀಳುವುದೇ ಹೆಚ್ಚು. ಇದನ್ನೇ ಎನ್‌ಕ್ಯಾಶ್ ಮಾಡಿಕೊಂಡ ವರ್ತಕರು, ವಿನ್ಯಾಸಗಾರರು ವಿವಿಧ ಬಗೆಯ ರೇಷ್ಮೆ ಸೀರೆಗಳನ್ನು ಮಾರುಕಟ್ಟೆಗೆ ತರಲು ಪೈಪೋಟಿ ನಡೆಸುತ್ತಾರೆ. ಗುಣಮಟ್ಟದಲ್ಲಿ ರಾಜಿ ಮಾಡಿಕೊಳ್ಳದೆ, ಕೊಳ್ಳುವವರ ಜೇಬಿಗೆ ಹೆಚ್ಚು ಹೊರೆಯಾಗದಂತೆ ಎಚ್ಚರ ವಹಿಸಿ ವಹಿವಾಟು ಮಾಡುವ ವರ್ತಕರೂ ಇದ್ದಾರೆ. ಚೆನ್ನೈ ಮೂಲದ ಆರ್‌ಎಂಕೆವಿ ಸಿಲ್ಕ್ಸ್, ಹಬ್ಬದ ಸಂದರ್ಭಕ್ಕಾಗಿಯೇ ಹೊಸ ಬಗೆಯ ರೇಷ್ಮೆ ಸೀರೆಗಳನ್ನು ತಂದಿದೆ. ನೇಕಾರರಿಂದ ಗ್ರಾಹಕರಿಗೆ ಒದಗಿಸುವ ಸಲುವಾಗಿಯೇ ವಿಶೇಷವಾಗಿ ನೇಯ್ಗೆ ಮಾಡಿದ ರೇಷ್ಮೆ ಸೀರೆಗಳು ಆಕರ್ಷಕವಾಗಿವೆ. ಮೂರು ವಿಭಾಗಗಳಲ್ಲಿ ಆರ್‌ಎಂಕೆವಿ ಸೀರೆಗಳಿವೆ. ಜಾನಪದ ಕಲೆಯನ್ನು ಬಿಂಬಿಸುವ ವಿನ್ಯಾಸದ ವಸ್ತ್ರಗಳು, ಭಾರತೀಯ ಪರಂಪರೆಯನ್ನು ಪ್ರತಿಬಿಂಬಿಸುವ ಸೀರೆಗಳು ಹಾಗೂ ಲಿನೊ ಮಾದರಿಯ ಸೀರೆಗಳು. ಮೈಸೂರು ಅರಮನೆಯ ಒಳಾಂಗಣದಲ್ಲಿರುವ ಕೆಲವು ಚಿತ್ರಕಲೆಗಳನ್ನು ಸಹ ಸೀರೆಯಲ್ಲಿ ಒಡಮೂಡಿಸಲಾಗಿದೆ. 'ಹಂಸ ದಮಯಂತಿ' ಈ ಪರಿಕಲ್ಪನೆಯಲ್ಲಿ ಒಂದು. ಇವೆಲ್ಲವನ್ನೂ ನೈಸರ್ಗಿಕ ಬಣ್ಣದಿಂದ ತಯಾರಿಸಲಾಗಿದೆ.

'ಜಾನಪದ ಕಲೆಗೆ, ಸಂಪ್ರದಾಯಕ್ಕೆ ಹೆಚ್ಚಿನ ಒತ್ತು ನೀಡುವ ಸಲುವಾಗಿ ರೇಷ್ಮೆ ವಸ್ತ್ರದಲ್ಲಿ ಈ ಪರಿಕಲ್ಪನೆಯನ್ನು ಒಡಮೂಡಿಸಲಾಗಿದೆ. ಹೂವು, ಹಣ್ಣು, ಎಲೆ, ಬೇರುಗಳಿಂದ ಹೀರಲ್ಪಟ್ಟ ನೈಸರ್ಗಿಕ ಬಣ್ಣಗಳನ್ನೇ ಬಳಸಿ ಸೀರೆಯ ಮೇಲೆ ಚಿತ್ತಾರ ಬರೆಯಲಾಗಿದೆ. ಇದು ಏಷ್ಯಾದ ವಿವಿಧ ಜನಾಂಗಗಳ, ಕುಟುಂಬಗಳ ಜಾನಪದದ ವೈವಿಧ್ಯಮಯ ಕಥೆಗಳನ್ನು ಅನಾವರಣ ಮಾಡುವಂತಿವೆ. ಆಚರಣೆ, ಜೀವನಶೈಲಿಯನ್ನು ಪ್ರತಿಬಿಂಬಿಸುವಂತಿವೆ' ಎಂದು ಹೇಳುತ್ತಾರೆ ಚೆನ್ನೈಯ ಆರ್‌ಎಂಕೆವಿ ಸಿಲ್ಕ್ಸ್‌ನ ವ್ಯವಸ್ಥಾಪಕ ನಿರ್ದೇಶಕ ಎನ್. ಶಂಕರ್ ಕುಮಾರಸ್ವಾಮಿ.

'ನಮ್ಮ ಭಾರತೀಯ ಪರಂಪರೆಯ ಕಾಲಾತೀತ ಕಲೆಯನ್ನು ಬಿಂಬಿಸುವ, ದೇಶದ ನಾನಾ ಭಾಗಗಳ ಸಾಂಪ್ರದಾಯಿಕ ಅಂಶಗಳನ್ನು ಎತ್ತಿಹಿಡಿಯುವ ಹಲವು ವಿಚಾರಗಳನ್ನು ಸೀರೆಯ ವಿನ್ಯಾಸಗಳಲ್ಲಿ ತರಲಾಗಿದೆ. ನಮ್ಮ ನಿನ್ನೆ, ಇಂದು ನಾಳೆಗಳ ಆಗುಹೋಗುಗಳನ್ನು ಕಲೆಯಲ್ಲಿ ಅಭಿವ್ಯಕ್ತಿಸಲಾಗಿದೆ. ಇದು ಸೀರೆಯಲ್ಲಿ ಅಚ್ಚೊತ್ತಿರುವುದು ವಿಶೇಷವೇ ಎನ್ನಬಹುದು. 'ಭುಜೋಡಿ ಸೀರೆ' ಹೆಸರಿನಲ್ಲಿ ಮಾವಿನಹಣ್ಣಿನ ಚಿತ್ತಾರ, ಅಂಚಿಗೆ ಸ್ಟ್ರಿಪ್ ಇರುವಂಥ ರೇಷ್ಮೆ ಸೀರೆ ಹೆಂಗಳೆಯರಿಗೆ ದೇಸಿ ಕಲ್ಪನೆಯನ್ನು ಮನದಲ್ಲಿ ಅಚ್ಚೊತ್ತುವಂತೆ ಚಿತ್ರಿಸಲಾಗಿದೆ' ಎಂದು ಹೇಳುತ್ತಾರೆ ಅವರು.

'ಪರಿಸರಕ್ಕೆ ತೀರಾ ಹತ್ತಿರವಾದ 'ಲಿನೊ' ವಿನ್ಯಾಸದ ಸೀರೆಗಳು ಈ ಸರಣಿಯ ಮತ್ತೊಂದು ವಿಶೇಷ. ನೈಸರ್ಗಿಕ ಬಣ್ಣಗಳಿಂದಲೇ ಈ ಸೀರೆಗಳನ್ನು ವಿನ್ಯಾಸಗೊಳಿಸಲಾಗಿದೆ. ಎಥ್ನಿಕ್ ಉಡುಪಾಗಿಯೂ ಇಂಥ ಸೀರೆಗಳನ್ನು ಬಳಸಬಹುದು. ಇದರಲ್ಲಿ ವಿವಾ ಮೆಜೆಂಟ ಲಿನೊ ಸೀರೆ, ತಾಜ್ ಲಿನೊ ವರ್ಣ, ಲಿನೊ ವರ್ಣ ಬುಟ್ಟಾ ಸೀರೆ, ಲಿನೊ ಫ್ಲೋರಲ್ ವರ್ಣ, ಕ್ಲಾಸಿಕ್ ಲಿನೊ ಮುಂತಾದ ವಿನ್ಯಾಸ ವೈವಿಧ್ಯಗಳಿದ್ದು ಸಾಂಪ್ರದಾಯಿಕ ಮನೋಭಾವದ ಮಹಿಳೆಯರಿಗೆ ಖಂಡಿತವಾಗಿ ಇಷ್ಟವಾಗಬಹುದು ಎಂಬ ವಿಶ್ವಾಸ ನಮ್ಮದು' ಎನ್ನುತ್ತಾರೆ ಆರ್‌ಎಂಕೆವಿ ಸಿಲ್ಕ್ಸ್‌ನ ಬೆಂಗಳೂರು ಘಟಕದ ಮುಖ್ಯಸ್ಥ ಮುರಳಿ.

ಚೆನ್ನೈ ಮೂಲದ ಆರ್‌ಎಂಕೆವಿ ಸಿಲ್ಕ್ಸ್ ಕೈಮಗ್ಗದ ಕಾಂಜೀವರಂ ರೇಷ್ಮೆ ಸೀರೆಗಳಿಗೆ ಹೆಸರಾಗಿದ್ದು, ಉತ್ತಮ ವಿನ್ಯಾಸ, ಗುಣಮಟ್ಟಕ್ಕಾಗಿ ರಾಷ್ಟ್ರೀಯ ಪ್ರಶಸ್ತಿಗೂ ಭಾಜನವಾಗಿದೆ.


ಆರ್‌ಎಂಕೆವಿ ಸಿಲ್ಕ್ ಸೀರೆ ಮಳಿಗೆ ನಿರ್ದೇಶಕರಾದ ಶಂಕರ್ ಕುಮಾರಸ್ವಾಮಿ ಮತ್ತು ಪ್ರಣವ ಕುಮಾರಸ್ವಾಮಿ


ಹಂಸ ದಮಯಂತಿ ವಿನ್ಯಾಸದ ರೇಷ್ಮೆ ಸೀರೆ